ಎಂ ವಿ ಸಿ ನಂಃ 263/2025
ಪಿ ಡಬ್ಲ್ಯುಃ 1

**ದಿನಾಂಕಃ09-01-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 3 ರ ಪರ ಶ್ರೀಮತಿ ಎಸ್ ಎಂ ವಕೀಲರಿಂದಃ**

ನಾನು ಬಿ.ಎ ಪದವಿ ಮುಗಿಸಿರುತ್ತೇನೆ. ನನಗೆ ಈಗ 55 ವರ್ಷ ವಯಸ್ಸು ಇರುತ್ತದೆ. ನನಗೆ 55 ವರ್ಷ ವಯಸ್ಸು ಇರುತ್ತದೆ ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ದಿನ ಕಾರಿನಲ್ಲಿ ಚಿಕ್ಕಮಗಳೂರಿನಿಂದ ಉಡುಪಿಗೆ ಹೋಗುತ್ತಿದ್ದೆನು. ಸದರಿ ಕಾರಿನಲ್ಲಿ ನಾನು, ನನ್ನ ಮಗ ಮತ್ತು ನನ್ನ ಗಂಡ ಪ್ರಯಾಣಿಸುತ್ತಿದ್ದೆವು. ನಾನು ಕಾರಿನ ಮುಂಬದಿಯ ಸೀಟಿನಲ್ಲಿ ಕುಳಿತಿದ್ದೆನು. ಆ ದಿನ ಕಾರನ್ನು 1 ನೇ ಎದುರುದಾರರು ಚಲಾಯಿಸುತ್ತಿದ್ದರು. ಸದರಿ ಕಾರು 2 ನೇ ಎದುರುದಾರರ ಹೆಸರಿನಲ್ಲಿ ಇರುತ್ತದೆ.

2. ನಾನು ಕೂಲಿ ಕೆಲಸ ಮಾಡುತ್ತ ಮಾಸಿಕ ರೂ.25,000/- ಆದಾಯ ಗಳಿಸುತ್ತಿದ್ದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾಸಿಕ ರೂ.25,000/- ಆದಾಯ ಗಳಿಸುತ್ತಿದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ವೈಧ್ಯಕೀಯ ಬಿಲ್ಲುಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ಬೈಕ್ ಸಂಖ್ಯೆ ಕೆಎ-01 ಕೆಎಚ್-0888 ಚಾಲಕನ ಸವಾರನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಬೈಕ್ ಚಲಾಕನಿಗೆ ಚಾಲನಾ ಪರವಾನಿಗೆ ಪತ್ರ, ವಿಮೆ ಇರದ ಕಾರಣ ನಮ್ಮ ಕಾರಿನ ಮೇಲೆ ದೂರುನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕಾರನ್ನು 3 ನೇ ಎದುರುದಾರರಿಂದ ಪರಿಹಾರ ಪಡೆಯುವ ಸಲುವಾಗಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ.

3. ನಾನು ಪ್ರಶಮನಿ ಆಸ್ಪತ್ರೆ ಮತ್ತು ನಾರಾಯಣ ಹೆಲ್ತ್ ಕೇರ್ ನಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ತೀವ್ರ ಸ್ವರೂಪದ ಗಾಯಗಳು ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಸಾಮಾನ್ಯ ಸ್ವರುಪದ ಗಾಯಗಳು ಉಂಟಾಗಿದ್ದರು ಸಹ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇಂಪ್ಲಾಂಟ್ ಅನ್ನು ರಿಮೂವ್ ಮಾಡಲು ಇನ್ನೊಂದು ಶಸ್ತ್ರ ಚಿಕಿತ್ಸೆ ಅವಶ್ಯಕತೆ ಇರುತ್ತದೆ ಎಂದು ಉತ್ತರಿಸುತ್ತಾರೆ. ನನಗೆ ಮುಂದುವೆರದು ಚಿಕಿತ್ಸೆ ಅವಶ್ಯಕತೆ

ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕಿತ್ಸೆಗಾಗಿ ನಾನು ಸುಮಾರು ರೂ 8 ಲಕ್ಷ ಹಣವನ್ನು ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4.ನಾನು ಅಪಘಾತದಿಂದ ಸಂಪೂರ್ಣವಾಗಿ ಗುಣಮುಖಳಾಗಿದ್ದು ಮುಂದಿನ ಚಿಕಿತ್ಸೆಯ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಶಾಶ್ವತ ಅಂಗ ನ್ಯೂನ್ಯತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮುಂದಿನ ಚಿಕಿತ್ಸೆಗಾಗಿ ರೂ 5 ಲಕ್ಷ ಹಣದ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದಿನ ಚಿಕಿತ್ಸೆಗಾಗಿ ರೂ 5 ಲಕ್ಷ ಅವಶ್ಯಕತೆ ಇರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೊದಲಿನ ರೀತಿ ಈಗಲೂ ಸಹ ದೈನಂದಿನ ಕಾರ್ಯಗಳನ್ನು ಮಾಡಲು ಶಕ್ತಳು ಇರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ಬೈಕ್ ಚಾಲಕನ ತಪ್ಪಿನಿಂದ ಆಗಿದ್ದರೂ ಸಹ ಉದ್ದೇಶಪೂರ್ವಕವಾಗಿ ಸದರಿ ಬೈಕ್ ಚಾಲಕ ಮತ್ತು ಮಾಲೀಕ ಹಾಗೂ ವಿಮಾ ಕಂಪನಿಯವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ಮತ್ತು **2** ನೇ ಎದುರುದಾರರ ಪರ ಶ್ರೀ ಬಿ ವಿ ಜಿ ವಕೀಲರಿಂದಃ</u>

1 ನೇ ಎದುರುದಾರರು ಚಾಲನಾ ಪರವಾನಿಗೆ ಪತ್ರ ವನ್ನು ಹೊಂದಿರುತ್ತಾರೆ ಎಂದರೆ ಸರಿ. 2 ನೇ ಎದುರುದಾರರ ಹೆಸರಿನಲ್ಲಿ ಕಾರು ಇರುತ್ತದೆ ಎಂದರೆ ಸರಿ. 1 ನೇ ಎದುರುದಾರರ ತಪ್ಪಿನಿಂದ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದುರುದಾರರನ್ನು ಅನವಶ್ಯಕ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕಾರಿಗೆ ಅಪಘಾತ ಆಗುವ ಕಾಲಕ್ಕೆ ವಿಮೆ ಚಾಲ್ತಿ ಇದ್ದ ಕಾರಣ 1 ನೇ ಮತ್ತು 2 ನೇ ಎದುರದಾರರು ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ
**ನ.ರಾ.ಪುರ, ಸಂಚಾರಿ ನ್ಯಾಯಾಲಯ, ಕೊಪ್ಪ.**

ಸಾಕ್ಷಿದಾರರ ಸಹಿಃ

ಎಂ ವಿ ಸಿ ನಂಃ 263/2025
ಪಿ ಡಬ್ಲ್ಯುಃ 1

ಎಂ ವಿ ಸಿ ನಂಃ 263/2025
ಪಿ ಡಬ್ಲ್ಯುಃ 1